

ಗ್ರೇಟ್ ಲೇಕ್ಸ್ ಎಂಬ ಸ್ವರ್ಗದ ಸರೋವರ

ತಡಿಯಂಡ್‌ಮೋಳು, ಬ್ರಹ್ಮಗಿರಿ, ಕೋಳಿಕ್ಕಾಮಲೆ, ಮೊನ್ನಾನ್‌ಮಲೆ, ಕುಮಾರಪರ್ವತ, ಚಿಕ್ಕಮಗಳೂರಿನ ಮುಳ್ಳಯ್ಯನಗಿರಿ, ದೇವೀರಮ್ಮನ ಬೆಟ್ಟ, ಕಲ್ಲತ್ತಗಿರಿ, ದೀಪದಕಲ್ಲು, ಎತ್ತಿನಭುಜ, ಶಿರಾಡಿಘಾಟಿಯು ಅರಮನೆಗುಡ್ಡ, ವೆಂಕಟಗಿರಿ, ಅರೆಬೆಟ್ಟ, ಒಂಬತ್ತುಗುಡ್ಡ, ಚಾರ್ಮಾಡಿಘಾಟಿಯ ದೊಡ್ಡೇರಿಬೆಟ್ಟ, ಮಿಂಚುಕಲ್ಲು, ಬಾಳೆಗುಡ್ಡ, ಹುಲಿದನಬೆಟ್ಟ, ರಾಮನಗುಡ್ಡ, ಹೊಸ್ಮನೆಬೆಟ್ಟ, ಕುದುರೆಮುಖದ ಹಿರಿಮರಿಗುಪ್ಪೆ, ಕೃಷ್ಣಗಿರಿ, ಗಂಗಡಿಕಲ್ಲು, ಕಡ್ತಿಕಲ್‌ಘಾಟಿಯ ದುರ್ಗದಬೆಟ್ಟ, ಬಿಸಿಲೆಘಾಟಿಯ ಕನ್ನಡಿಕಲ್ಲು, ಪಟ್ಲಬೆಟ್ಟ, ಆಗುಂಬೆಘಾಟಿಯ ಕುಂದಾದ್ರಿ, ಜೋಗಿಗುಂಡಿ, ಬರ್ಕಣ ಕಣಿವೆ, ದೇವೀಮನೆ ಘಾಟಿಯ ಎಳಸಿರಿಬೆಟ್ಟ ಇನ್ನುಳಿದಂತೆ ಅಣಶಿ, ಕದ್ರಾ, ಜೋಯಿಡಾ, ಯಲ್ಲಾಪುರದ ಕಾಡುಕಣಿವೆಗಳು ನುರಿತ ಚಾರಣಿಗರ ಆಯ್ಕೆಗೆ ಮೆನು ಕಾರ್ಡ್.

ನಿಸರ್ಗ ಸೌಂದರ್ಯವನ್ನು ಗ್ರಹಿಸುವ, ಅಡವಿ, ಪರ್ವತಗಳ ಸಹಿಸುವ ಪ್ರಕೃತಿ ಪೂಜಿತ ಹವ್ಯಾಸೀ ಚಾರಣಿಗರಿಗೆ ವರ್ಷವಿಡೀ ಸೂಕ್ತವೇ ಆದರೂ

# ಹಿಮದ ಹಾದಿಯಲ್ಲಿ ಕಂಡ ತಿರುವುಗಳು



ಚಾರಣವೆಂದರೆ ಗುಡ್ಡ ಹತ್ತಿಳಿಯುವುದು, ಕಾಡು ಮೇಡುಗಳಲ್ಲಿ ಅಲೆಯುವುದು ಎಂಬ ಭ್ರಮೆಯಲ್ಲಿದ್ದ ನನಗೆ ನಿಜವಾದ ಸವಾಲು ಎದುರಾಗಿದ್ದು ಹಿಮದ ಹಾದಿಯ ಟ್ರೆಕ್ಕಿಂಗ್‌ನಲ್ಲಿ. ಕಾಶ್ಮೀರದ 'ಗ್ರೇಟ್ ಲೇಕ್ಸ್' ಟ್ರೆಕ್ ಮಾಡಿದ್ದು ನನ್ನ ಬದುಕಿನಲ್ಲಿ ಯಾವತ್ತೂ ಮರೆಯಲಾಗದ ಅನುಭವ ಕೊಟ್ಟಿದೆ. ನಾನು ಅಲ್ಲಿಗೆ ಹೋಗಿದ್ದು 2013ರಲ್ಲಿ. ಆಗ ಅದು ಅಷ್ಟೊಂದು ಪ್ರಸಿದ್ಧ ಟ್ರೆಕ್ ತಾಣ ಆಗಿರಲಿಲ್ಲ. ಇಲ್ಲೆಲ್ಲಾ ಹದಿನೈದು ಇಪ್ಪತ್ತು ಕಿಲೋಮೀಟರ್ ದೂರವನ್ನು ಸಲೀಸಾಗಿ ಕ್ರಮಿಸುತ್ತಿದ್ದ ನಾನು ಕಾಶ್ಮೀರ ಯಾನದ ಮೊದಲ ದಿನವೇ ಎಂಟು ಕಿ.ಮೀ. ಟ್ರೆಕ್ ಮುಗಿಸುವ ಹೊತ್ತಿಗೆ ವಿಪರೀತ ತಲೆನೋವು, ಜ್ವರ ಕಾಣಿಸಿಕೊಂಡಿತು. ಮತ್ತೆ ಮುಂದಕ್ಕೆ ಹೋಗಲು ಸಾಧ್ಯವೇ ಇಲ್ಲ ಎಂದುಕೊಂಡಿದ್ದೆ. ಆದರೆ ಮಾತ್ರೆಗಳ ಸಹಾಯದಿಂದ ಸ್ವಲ್ಪ ಚೇತರಿಸಿಕೊಂಡು, ಸ್ನೇಹಿತರ ಉತ್ಸಾಹವನ್ನು ನಾನೂ ಮೈಗೂಡಿಸಿಕೊಂಡು ಹೊರಟೆ.

ನಮ್ಮ ಟ್ರೆಕ್ಕಿಂಗ್‌ನ ಮೂರನೇ ದಿನದ ಆರಂಭದಲ್ಲಿಯೇ ಮಳೆ ಪ್ರಾರಂಭವಾಯ್ತು. ಹಿಮಾಲಯದಲ್ಲಿ ಮಳೆ ಉಂಟುಮಾಡುವ ಪರಿಣಾಮ ತುಂಬ ಭೀಕರವಾದದ್ದು. ಅಂದೇ ನಮ್ಮ ಟ್ರೆಕ್‌ನ ಎತ್ತರದ ಪಾಯಿಂಟ್ ದಾಟಿ ಹೋಗಬೇಕಿತ್ತು. ಆದರೆ ಸುರಿದ